**0301/0721**

**III Semester 3 Yrs. LL.B./VII Semester 5 Yrs. B.A., LL.B./B.B.A., LL.B.**
**Examination, June/July 2015**
**ENVIRONMENTAL LAW**

Duration : 3 Hours Max. Marks : 100

**Instructions** : 1. Answer Q. No. **9** and **any five** of the remaining questions.
2. Question No. **9** carries **20** marks and the remaining questions carry **16** marks **each**.
3. Answers should be written either in **English** or **Kannada** completely.

**ಸೂಚನೆಗಳು** : 1. ಪ್ರಶ್ನೆ **9** ಮತ್ತು ಉಳಿದ ಯಾವುದಾದರೂ **ಐದನ್ನು** ಉತ್ತರಿಸಿರಿ.
2. ಪ್ರಶ್ನೆ **9** ಕ್ಕೆ **20** ಅಂಕಗಳು ಮತ್ತು ಉಳಿದವುಗಳಿಗೆ **ತಲಾ 16** ಅಂಕಗಳು.
3. ಪೂರ್ಣ ಉತ್ತರವನ್ನು **ಕನ್ನಡ** ಅಥವಾ **ಇಂಗ್ಲೀಷ್**ನಲ್ಲಿ ಬರೆಯಿರಿ.

Q. No. 1. Define "Environment" and explain the various causes of Environmental pollution. Marks : 16

''ಪರಿಸರ''ವನ್ನು ವ್ಯಾಖ್ಯಾನಿಸಿರಿ. ಪರಿಸರ ಮಾಲಿನ್ಯದ ವಿವಿಧ ಕಾರಣಗಳನ್ನು ವಿವರಿಸಿ.

Q. No. 2. Explain scope of Art 14 and 19(1)(g) of Indian Constitution relating to Environmental protection. Marks : 16

ಪರಿಸರ ಸಂರಕ್ಷಣೆಗೆ ಸಂಬಂಧಿಸಿದಂತೆ ಭಾರತೀಯ ಸಂವಿಧಾನದ ಅನುಚ್ಛೇದ 14 ಮತ್ತು 19(1)(g)ಯ ವ್ಯಾಪ್ತಿಯನ್ನು ವಿವರಿಸಿರಿ.

Q. No. 3. Write a brief note on Stockholm Dectaration 1972. Marks : 16

ಸ್ಟಾಕ್ ಹೋಮ್ ಉದ್ಘೋಷಣೆ 1972ರ ಮೇಲೆ ಲಘು ಟಿಪ್ಪಣಿ ಬರೆಯಿರಿ.

Q. No. 4. What are the remedies available for Environmental problem under criminal laws ? Marks : 16

ಅಪರಾಧಿಕ ಕಾನೂನುಗಳ ಅಡಿಯಲ್ಲಿ ಪರಿಸರ ಸಮಸ್ಯೆಗಳಿಗೆ ದೊರಕುವ ಪರಿಹಾರಗಳು ಯಾವುವು ?

Q. No. 5. Define air pollution. Explain the powers and functions of Central Pollution Control Board to control and prevent air pollution. Marks : 16

ವಾಯು ಮಾಲಿನ್ಯವನ್ನು ವ್ಯಾಖ್ಯಾನಿಸಿ. ವಾಯು ಮಾಲಿನ್ಯವನ್ನು ತಡೆಯಲು ಮತ್ತು ನಿಯಂತ್ರಣ ಮಾಡಲು ಕೇಂದ್ರ ವಾಯು ಮಾಲಿನ್ಯ ನಿಯಂತ್ರಣ ಮಂಡಳಿಯ ಅಧಿಕಾರ ಮತ್ತು ಕಾರ್ಯಗಳನ್ನು ವಿವರಿಸಿ.

Q. No. 6. Describe briefly the sailent features of Environment (Protection) Act, 1986. Explain the different delegated legislations under Environmental law. Marks : 16

ಪರಿಸರ (ಸಂರಕ್ಷಣೆ) ಕಾಯ್ದೆ,1986ರ ಅಡಿಯಲ್ಲಿ ಅಧಿಕಾರ ಪ್ರತ್ಯಾಯೋಜನೆಯಡಿಯಲ್ಲಿ ರೂಪಿಸಲ್ಪಟ್ಟ ಕಾನೂನುಗಳನ್ನು ವಿವರಿಸಿರಿ.

Q. No. 7. Explain the procedure prescribed in Bio-medical Waste (Management and Handling) Rules, 1998 for safe disposal of Bio-medical waste. Marks : 1×16=16

ಸುರಕ್ಷಿತ ಜೈವಿಕ-ವೈದ್ಯಕೀಯ ತ್ಯಾಜ್ಯ ವಿಲೇವಾರಿಗೆ, ಜೈವಿಕ ತ್ಯಾಜ ವಿಲೇವಾರಿ ನಿಯಮಗಳು, 1998ರ ಅಡಿಯಲ್ಲಿ ಕೊಡಲ್ಪಟ್ಟ ಪ್ರಕ್ರಿಯೆಯನ್ನು ವಿವರಿಸಿರಿ.

Q. No. 8. Write short note **any two** of the following. Marks : 2×8 =16

(a) Global Warming and Green House Effect

(b) Noise pollution

(c) Absolute liability

ಯಾವುದಾದರೂ **ಎರಡಕ್ಕೆ** ಟಿಪ್ಪಣಿ ಬರೆಯಿರಿ.

(a) ಭೂಮಿಯ ಕಾವೇರುವಿಕೆ ಮತ್ತು ಹಸಿರು ಮನೆ ಪರಿಣಾಮ

(b) ಶಬ್ದ ಮಾಲಿನ್ಯ

(c) ಸಂಪೂರ್ಣ ಹೊಣೆಗಾರಿಕೆ

Q. No. 9. Solve **any two** of the following problems. Marks : 2×10=20

ಯಾವುದಾದರೂ **ಎರಡು** ಸಮಸ್ಯೆಗಳಿಗೆ ಪರಿಹಾರ ನೀಡಿರಿ.

(a) Hubli Muncipal Corporation was charged with the primary duty to clean public streets, places and sewer and all places, which are open to the enjoyment of public. The Corporation failed to discharge its primary duties and which is hazardous to the life of residents. Suggest the appropriate remedies under Constitutional Law.

ಹುಬ್ಬಳ್ಳಿ ಪುರಸಭೆಯು ಎಲ್ಲಾ ಸಾರ್ವಜನಿಕ ಬೀದಿಗಳು, ಸ್ಥಳಗಳು ಮತ್ತು ಒಳಚರಂಡಿಗಳು ಹಾಗೂ ಸಾರ್ವಜನಿಕ ಉಪಭೋಗಕ್ಕಾಗಿ ತೆರೆದಿರುವ ಎಲ್ಲಾ ಸ್ಥಳಗಳನ್ನು ಸ್ವಚ್ಛವಾಗಿರಿಸುವ ಪ್ರಾಥಮಿಕ ಕರ್ತವ್ಯವನ್ನು ಹೊಂದಿದೆ. ಆದರೆ ಈ ಹುಬ್ಬಳ್ಳಿ ಪುರಸಭೆ ತನ್ನ ಪ್ರಾಥಮಿಕ ಕರ್ತವ್ಯಗಳನ್ನು ನಿಭಾಯಿಸಲು ವಿಫಲವಾಗಿದ್ದು. ಇದರಿಂದ ಹುಬ್ಬಳ್ಳಿಯ ನಿವಾಸಿಗಳ ಜೀವಗಳು ಅಪಾಯಕ್ಕೆ ಒಡ್ಡಲ್ಪಟ್ಟಿವೆ. ಈ ಸಮಸ್ಯೆಯನ್ನು ಪರಿಹರಿಸಲು ಸಂವಿಧಾನದಡಿಯಲ್ಲಿನ ಪರಿಹಾರಗಳನ್ನು ವಿವರಿಸಿರಿ.

(b) A rubber industry was situated in the industrial estate and was given licence under the Panchyatas and Factories Rules. The industry, using carbon block in huge quantities, polluted the atmosphere, and failed to apply the preventive measures, which was causing discomfort, injury and nuisance to peoples of that locality. Suggest remedies available under tort law.

ಒಂದು ರಬ್ಬರ್ ಕೈಗಾರಿಕೆಯು ಕೈಗಾರಿಕವಲಯದಲ್ಲಿ ತೆರೆಯಲು ಪಂಚಾಯಿತಿ ಮತ್ತು ಕಾರ್ಖಾನೆಯ ನಿಯಮಗಳ ಪ್ರಕಾರ ಪರವಾನಿಗೆ ಪಡೆದಿತ್ತು. ಈ ಕೈಗಾರಿಕೆಯು ಯತೇಚ್ಛ ದೊಡ್ಡ ಪ್ರಮಾಣದಲ್ಲಿ ಕಾರ್ಬನ್ ಬ್ಲಾಕ್‌ಗಳನ್ನು ಬಳಸುತ್ತಿದ್ದು, ಇದು ಪರಿಸರವನ್ನು ಕಲುಷಿತಗೊಳಿಸಿತು. ಈ ಕಾರ್ಖಾನೆಯು ಯಾವುದೇ ರೀತಿಯ ಕಲುಷಿತವನ್ನು ತಡೆಗಟ್ಟುವ ಕ್ರಮವನ್ನು ಅಳವಡಿಸಿರಲಿಲ್ಲ. ಇದರಿಂದ ಅಲ್ಲಿನ ಜನರಿಗೆ ಅನಾನುಕೂಲ, ಹಾನಿ ಮತ್ತು ಉಪದ್ರವ ಉಂಟಾಯಿತು. ಅಲ್ಲಿನ ನಿವಾಸಿಗಳು ಅಪಕೃತ್ಯ ಕಾನೂನಿನಡಿಯಲ್ಲಿ ಸಿಗಬಹುದಾದ ಪರಿಹಾರಗಳನ್ನು ಸೂಚಿಸಿರಿ.

(c) Tannery and other industries were set up in the State of Kerala. These industries discharged on enormous untreated effluents into the river. As a result of this, water of river polluted and agricultural land became totally unfit for cultivation.

What kind of remedy would you suggest under criminal law ?

ಚರ್ಮ ಹದ ಮಾಡುವ ಮತ್ತು ಇತರ ಕೈಗಾರಿಕೆಗಳು ಕೇರಳ ರಾಜ್ಯದಲ್ಲಿ ಸ್ಥಾಪನೆಗೊಂಡವು. ಈ ಕೈಗಾರಿಕೆಗಳಿಂದ ಹೊರಹೊಮ್ಮುವ ಸಂಸ್ಕರಿಸದ ತ್ಯಾಜ್ಯವನ್ನು ನದಿಗೆ ಬಿಡಲಾಯಿತು. ಇದರ ಪರಿಣಾಮವಾಗಿ ನದಿಯ ನೆಲ, ಮಣ್ಣು ಮತ್ತು ಅಂತರ್ಜಲ ಕಲುಷಿತಗೊಂಡಿತು. ಇದರಿಂದ ವ್ಯವಸಾಯದ ಜಮೀನು ವ್ಯವಸಾಯಕ್ಕೆ ಯೋಗ್ಯವಲ್ಲದಂತಾಯಿತು.

ಈ ಮೇಲಿನ ಸಮಸ್ಯೆಗೆ ಅಪರಾಧಿಕ ಕಾನೂನಿನಡಿಯಲ್ಲಿ ಸಿಗಬಹುದಾದ ಪರಿಹಾರವನ್ನು ಹೆಸರಿಸಿರಿ.